## ಕೃಷಿ ಪದ್ಧತಿ ಆದರಿತ ದೈವಾರಾಧನೆ

ದೈವಾರಾಧನೆಯ ಪರಂಪರೆಯು ಇಲ್ಲಿನ ಕೃಷಿ ಪದ್ಧತಿಯನ್ನು ಆಧರಿಸಿದೆ. ಅದು ನಮ್ಮ ಪೂರ್ವಕಾಲದ ಆಡಳಿತ ವ್ಯವಸ್ಥೆಯ ಒಂದು ಆಯಾಮವನ್ನು ವಿವರಿಸುತ್ತದೆ. ಪ್ರಸ್ತುತ ವ್ಯಾಪಾರೀ ಜಗತ್ತಿನಲ್ಲಿ ಈ ಆರಾಧನೆಯ ಹಿಂದಿರುವ ನಂಬಿಕೆಗಳೇನು, ಭಾವಸೂಕ್ಷ್ಮಗಳೇನು ಎಂಬುದನ್ನು ವಿವರಿಸುವುದಕ್ಕೆ ಕಷ್ಟವಾಗಬಹುದು. ಆದರೆ ಕರಾವಳಿಯಲ್ಲಿರುವ ಎಲ್ಲ ಜಾತಿ, ಧರ್ಮದ ಜನರ ಅಂತರಂಗದಲ್ಲಿ ದೈವದ ನಂಬಿಕೆ ಇದ್ದೇ ಇದೆ.



**–ದಯಾನಂದ ಕತ್ತಲ್‌ಸಾರ್**

ತುಳು ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷ



ಚಿತ್ರ: ಆದಿತ್ಯ ಜಿ. ತಿಳಿ

ಕರಾವಳಿಯಲ್ಲಿ ಸೌರಮಾನ ಆಚರಣೆಯು ಚಾಲ್ತಿಯಲ್ಲಿ ಇರುವುದರಿಂದ, ಆ ಪ್ರಕಾರ ಪ್ರತೀ ತಿಂಗಳ ಸಂಕ್ರಾಂತಿಯಂದು ದೈವದ ಮನೆಗೆ ನೀರಿಟ್ಟು ತೆಂಗಿನ ಕಾಯಿ ಒಡೆಯುವ ಪರಿಪಾಟವೂ ಇದೆ.

ಅರಸರ ಆಳ್ವಿಕೆಯ ಕಾಲದಲ್ಲಿ ಒಂದು ಪ್ರದೇಶವನ್ನು ಆಡಳಿತಕ್ಕೆ ಅನುಕೂಲವಾಗುವಂತೆ 48 ವಿಭಾಗಗಳನ್ನಾಗಿ ಮಾಡಲಾಗುತ್ತಿತ್ತು. ಆ ವ್ಯಾಪ್ತಿಯಲ್ಲಿ ಹದಿನಾರು ಗುತ್ತಿನ ಮನೆಗಳು, 16 ಒಳಗುತ್ತುಗಳು, 16 ಚಾಕ್ರಿಮನೆಗಳಿರುತ್ತವೆ. ಚಾಕರಿಯ ವಿಭಾಗದಲ್ಲಿ ನೂಲು ಹಾಕಿದವರಿಂದ ಹಿಡಿದು, ಡೋಲು ಬಡಿಯುವವರವರೆಗಿನ ವಿವಿಧ ಸ್ತರಗಳು ಇರುತ್ತಿದ್ದವು. ಈ ವ್ಯವಸ್ಥೆಯ ಕೇಂದ್ರಬಿಂದುವಾಗಿ ದೈವಾರಾಧನೆಯು ಗುರುತಿಸಿಕೊಂಡಿದ್ದು, ಅವಿಭಕ್ತ ಕುಟುಂಬ ವ್ಯವಸ್ಥೆಯನ್ನು ಎತ್ತಿ ಹಿಡಿಯುವ, ಕೃಷಿ ಬೆಳೆಗಳನ್ನು ಪೊರೆಯುವ ಮತ್ತು ನ್ಯಾಯದಾನವನ್ನು ಮಾಡುವ ಕಾಯಕವು ದೈವಗಳಿಗೆ ಸೇರಿದ್ದೆಂಬ ನಂಬಿಕೆಯಿದೆ. ವಾತ, ಪಿತ್ತ, ಕಫಗಳಿಂದ ಉಂಟಾಗುವ ಅನಾರೋಗ್ಯಕ್ಕೆ ಔಷಧವನ್ನು ಕೊಡುವ, ಹಸಿರು ಸಂಪತ್ತನ್ನು ಗೌರವಿಸುವ–ರಕ್ಷಿಸುವ ಕಿವಿಮಾತನ್ನೂ ದೈವಗಳು ಹೇಳುತ್ತವೆ. ಬಂಧುಗಳು, ಊರಜನರು ಪರಸ್ಪರ ಜಗಳಾಡಿಕೊಳ್ಳದೇ, ಹತ್ತು ತಾಯಿಯ ಮಕ್ಕಳು ಒಂದೇ ತಾಯಿಯ ಮಕ್ಕಳಂತೆ ಬಾಳ್ವೆ ಮಾಡಿ ಎಂದು 'ನುಡಿ ಹೇಳುವ' ದೈವವು, 'ಬೆತ್ತ ಕಡಿದರೆ ತುಂಡಾದೀತು, ನೀರ ಕಡಿದರೆ ತುಂಡಾಗುವುದೇ..?' ಎಂದು ಪ್ರಶ್ನಿಸಿ ಸಂಬಂಧಗಳ ಮಹತ್ವವನ್ನು ವಿವರಿಸುತ್ತದೆ.

ಬೆಂಕಿಗೆ ಕರಕಲಾದ<br>
ಗಾಳಿಗೆ ಹಾರಿ ಹೋಗದ<br>
ನೀರಿನಲ್ಲಿ ನೆನೆಯದ<br>
ಬಿಸಿಲಿಗೆ ಒಣಗದ<br>
ಕತ್ತಿಯಲ್ಲಿ ಕಡಿಯಲಾಗದ

ಒಟ್ಟಿನಲ್ಲಿ ಆವಿಯಾಗದ, ಅಳಿಸಲಾಗದ, ಕಣ್ಣಿಗೆ ಗೋಚರಿಸದ, ಅಳತೆಗೆ ಸಿಕ್ಕದ, ಗಣನೆಗೆ ಸಿಕ್ಕದ ಒಂದು ಮಾಯಾಶಕ್ತಿಯನ್ನು ಆರಾಧಿಸುವುದು ಈ ದೈವಾರಾಧನೆಯ ಮೂಲ ಆಶಯ. ಶಿಲ್ಪ, ರೂಪಗಳು ಒದಗುವುದಕ್ಕೂ ಮುನ್ನ ದೈವಗಳನ್ನು ದಟ್ಟ ಕಾನನದಲ್ಲಿ ಒಂದು ಕಪ್ಪುಕಲ್ಲನ್ನು ನೆಟ್ಟು ಆರಾಧಿಸುವ ಪದ್ಧತಿಯಿತ್ತು. ಇಂದು ಎಲ್ಲದಕ್ಕೂ ರೂಪ, ಸೌಂದರ್ಯವನ್ನು ಅನ್ವಯಿಸಿದ್ದರಿಂದ ಆರಾಧನೆಯ ಸ್ವರೂಪಗಳು ಬದಲಾಗಿವೆ. ಹಣದ ಹರಿವು ಹೆಚ್ಚಾಗಿರುವ ಕಡೆಗಳಲ್ಲಿ ಅದು ವೈಭವದ ತಾರಕಕ್ಕೇರಿರುವುದನ್ನೂ ಕಾಣುತ್ತೇವೆ.

### ಅಂತರಂಗ-ಬಹಿರಂಗದ 'ಸತ್ಯ'

ತುಳುನಾಡಿನ ಮೂರು ಸುತ್ತಲೂ ನೀರಿದ್ದರೆ ಒಂದೆಡೆ ಪಶ್ಚಿಮ ಘಟ್ಟವಿದೆ. ಘಟ್ಟದ ಮೇಲ್ಭಾಗದಿಂದ ನೀರಿನ ಹರಿವು ಕೆಳಭಾಗಕ್ಕೆ ಸಾಗುವಾಗ, ಓಡುವ ನೀರನ್ನು ನಿಲ್ಲಿಸುವ ಸಲುವಾಗಿ ಕಟ್ಟಗಳನ್ನು ಕಟ್ಟುತ್ತ, ಕೃಷಿ ಮತ್ತು ಪಶುಸಂಗೋಪನೆ ಮಾಡುತ್ತ ಜೀವನ ಸಾಗಿಸುವುದು ಇಲ್ಲಿನ ಅನಿವಾರ್ಯತೆಯಾಗಿತ್ತು. ಈ ಪ್ರಕ್ರಿಯೆ ಕೃಷಿಯನ್ನೂ ಪಶುಗಳನ್ನೂ ಕಾಪಿಟ್ಟುಕೊಳ್ಳಲು ನೆರವಾಗುತ್ತಿದ್ದುದು 'ಸತ್ಯ'. ಅದು ವ್ಯಕ್ತಿಯು ಅಂತರಂಗದಲ್ಲಿ ನಂಬಿದ ಸತ್ಯವೂ ಹೌದು. ಬಹಿರಂಗದಲ್ಲಿ ಆರಾಧನೆಗೆ ಒಳಪಡುವ ದೈವಗಳೂ ಹೌದು. ಆದ್ದರಿಂದ ದೈವಾರಾಧನೆಗೆ ಮತ್ತೊಂದು ಹೆಸರು ಸತ್ಯದ ಆರಾಧನೆ. ಅಂತರಂಗದಲ್ಲಿ ಸತ್ಯವು ಬಲವಾಗಿದ್ದಾಗ ಬಹಿರಂಗದಲ್ಲಿ ಸಾಮರಸ್ಯವು ಭದ್ರವಾಗಿರುತ್ತದೆ ಎಂಬುದು ತುಳುವರ ಪುರಾತನ ನಂಬಿಕೆ. ಇಂದಿಗೂ ತುಳುವರು ಪ್ರಾರ್ಥನೆ ಮಾಡುವಾಗ, ನಂಬಿದ ಸತ್ಯಗಳು ನಮ್ಮ ಬಾಳಿಗೆ ಇಂಬು ಕೊಟ್ಟು ಕಾಪಾಡಲಿ ಎಂದು ಕೇಳಿಕೊಳ್ಳುವುದು ವಾಡಿಕೆ.

ಕೋಲ ಅಥವಾ ನೇಮದ ಸಂದರ್ಭದಲ್ಲಿ ದೈವವನ್ನು ಬರಮಾಡಿಕೊಂಡಾಗ ಅಲ್ಲಿ ದೈವವು ಭಕ್ತರಿಗೆ ಗೋಚರಿಸುತ್ತದೆಯೇ ಎಂಬೊಂದು ಪ್ರಶ್ನೆ ಸದಾ ಜೀವಂತವಾಗಿರುತ್ತದೆ. ದೈವವು ಕಿಂಚಿತ್ ಹೊತ್ತು ದೈವಪಾತ್ರಿಯಲ್ಲಿ (ದೈವದ ವೇಷಧಾರಿ) ಆವಾಹನೆಯಾಗುವುದರಿಂದ, ಅವನು ಹೇಳುವ ನುಡಿಗಳು ಪವಿತ್ರವಾದುದು ಎಂಬ ನಂಬಿಕೆಯಿದೆ. ಕಿಂಚಿತ್ ಹೊತ್ತು ಎಂದರೆ ಅದನ್ನು ಮೂರುಮುಕ್ಕಾಲು ಗಳಿಗೆ ಎಂದು ಭಾವಿಸಲಾಗುತ್ತದೆ. ಭೂತಾರಾಧನೆಯ (ದೈವಾರಾಧನೆ) ಬಗ್ಗೆ ಅಧ್ಯಯನ ಸಂಶೋಧನೆಗಳನ್ನು ನಡೆಸಿರುವ ಹಿರಿಯ ಜಾನಪದ ತಜ್ಞ ಕೆ. ಚಿನ್ನಪ್ಪ ಗೌಡ ಅವರು ಈ ಪ್ರಕ್ರಿಯೆಯನ್ನು ಗುರುತಿಸುವುದು ಹೀಗೆ:

"ದೈವಗಳು ಆರಾಧನೆಯ ಸಂದರ್ಭದಲ್ಲಿ ಕಾಣಿಸಿಕೊಳ್ಳಬೇಕಾದರೆ ಜನರು ಕೆಲವು ನಿಯಮಗಳನ್ನು ಪಾಲಿಸಬೇಕಾಗುತ್ತದೆ. ದೈವಗಳು ಸಾಕಾರಗೊಳ್ಳಲು ಮಾಧ್ಯಮ ರೂಪದ ವ್ಯಕ್ತಿಯೊಬ್ಬ ಇರಬೇಕಾಗುತ್ತದೆ. ಅವನನ್ನು ಪಾತ್ರಿ ಅಥವಾ ಮಾನಿ ಎಂದು ಕರೆಯುತ್ತಾರೆ. ಗುರುತಿಸಿ ನಿಲ್ಲಿಸಿದ ಈ ವ್ಯಕ್ತಿಯ ಮೇಲೆ ದೈವವು ಆವೇಶಗೊಂಡು ಅದರ ಅಸ್ತಿತ್ವವನ್ನು ಪ್ರಕಟಿಸುತ್ತದೆ. ದೈವ ಮತ್ತು ಜನರ ನಡುವೆ ಸಂಪರ್ಕ ಸೇತುವೆಯಾಗಿ ಈ ವ್ಯಕ್ತಿ ವ್ಯವಹರಿಸುತ್ತಾನೆ. ಆವೇಶಕ್ಕೆ ಒಳಗಾದ ವ್ಯಕ್ತಿಯಲ್ಲಿ 'ದೈವ'ವನ್ನು ಜನರು ಕಾಣುತ್ತಾರೆ. ಅವನ ವರ್ತನೆ, ಮಾತು, ಸಿಟ್ಟು, ಆವೇಶ, ತೃಪ್ತಿ ಎಲ್ಲವೂ ದೈವದ್ದೇ ಎಂದು ಜನರು ಭಾವಿಸುತ್ತಾರೆ. ದೈವ ಮತ್ತು ಜನರ ನಡುವೆ ನಡೆಯುವ ಎಲ್ಲ ಸಂವಾದ, ಮಾತುಕತೆ, ಬೇಡಿಕೆ, ಪೂರೈಕೆಯ ಭರವಸೆ ಈ ವ್ಯಕ್ತಿ ಮಾಧ್ಯಮದ ಮೂಲಕವೇ ನಡೆಯುತ್ತದೆ. ಹೀಗೆ ದೈವವು ಮಾತನಾಡುವುದರಿಂದ, ಕಷ್ಟ ಸುಖ ಹಂಚಿಕೊಳ್ಳುವುದರಿಂದ, ಎಲ್ಲರನ್ನೂ ವಿಚಾರಿಸುವುದರಿಂದ ದೈವ ಮತ್ತು ಜನರ ನಡುವೆ ಇನ್ನಿಲ್ಲದ ಒಂದು ಆತ್ಮೀಯತೆ, ಪ್ರೀತಿ ವಿಶ್ವಾಸದ ಹಂಚುವಿಕೆ ಜನರ ಸಮಕ್ಷಮದಲ್ಲಿಯೇ ನಡೆಯುತ್ತದೆ. ಇದು ದೈವಾರಾಧನೆಗೆ ಅನನ್ಯತೆಯನ್ನು ತಂದುಕೊಟ್ಟ ಸಂಗತಿಯಾಗಿದೆ.